**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

**DTE-ADMI0ACM2/ 19/2025**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:17-04-2025.

**-:: ಪ್ರವೇಶಾಧಿಸೂಚನೆ ::-**

**ವಿಷಯ: 2025-26ನೇ ಸಾಲಿನ ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ 8ನೇ ತರಗತಿಯ ಪ್ರವೇಶಾತಿ ಬಗ್ಗೆ.**

*******

2025-26ನೇ ಸಾಲಿಗೆ ಕೆಳಕಂಡ ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ 8ನೇ ತರಗತಿಯ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಅಧಿಸೂಚನೆಯು ಸರ್ಕಾರದ ನಿಯಮಾವಳಿಗೆ ಒಳಪಟ್ಟಿರುತ್ತದೆ.

1. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಳ್ಳಾರಿ
2. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆ
3. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ
4. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರ್ಗಿ
5. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಮಂಗಳೂರು
6. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ

**1) ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳ ವೈಶಿಷ್ಟ್ಯಗಳು:-**

a) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಪ್ರೌಢಶಾಲೆಗಳಲ್ಲಿ ಬೋಧಿಸಲಾಗುವ ವಿಷಯಗಳೊಂದಿಗೆ ಈ ಕೆಳಕಂಡ ಯಾವುದಾದರೂ ಒಂದು ಇಂಜಿನಿಯರಿಂಗ್ ತಾಂತ್ರಿಕ ವಿಷಯವನ್ನು ಹೆಚ್ಚುವರಿಯಾಗಿ ಅಧ್ಯಯನ ಮಾಡಬೇಕಾಗುತ್ತದೆ.

1) ಎಲೆಕ್ಟ್ರಿಕಲ್ ಇಂಜಿನಿಯರಿಂಗ್
2) ಮೆಕ್ಯಾನಿಕಲ್ ಇಂಜಿನಿಯರಿಂಗ್

b) ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗಾಗಿಯೇ ಡಿಪ್ಲೋಮಾ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕೆಲವು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.

c) ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಎಸ್.ಎಸ್.ಎಲ್.ಸಿ ಅಭ್ಯರ್ಥಿಗಳು ಪಿ.ಯು.ಸಿ ವ್ಯಾಸಂಗಕ್ಕೂ ಸಹ ಅರ್ಹರಾಗಿರುತ್ತಾರೆ.

d) ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿನ ಶಿಕ್ಷಣ ಮಾಧ್ಯಮ:- ಸಾಮಾನ್ಯ ವಿಷಯಗಳನ್ನು ಕನ್ನಡದಲ್ಲೂ ಹಾಗೂ ತಾಂತ್ರಿಕ ವಿಷಯಗಳನ್ನು ಇಂಗ್ಲೀಷ್‌ನಲ್ಲೂ ಬೋಧಿಸಲಾಗುವುದು.

e) ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ 8, 9 ಮತ್ತು 10ನೇ ತರಗತಿಯ **ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.250/-ರಂತೆ ಶಿಷ್ಯವೇತನವನ್ನು (10 ತಿಂಗಳಿಗೆ ರೂ.2,500/-)** ನೀಡಲಾಗುವುದು.

2. **ಪ್ರವೇಶಕ್ಕಾಗಿ ಶಿಕ್ಷಣಾರ್ಹತೆ:-** ಅಭ್ಯರ್ಥಿಯು ಕರ್ನಾಟಕ ಸರ್ಕಾರದ/ಸಿಬಿಎಸ್‌ಇ/ಐಸಿಎಸ್‌ಇ ಮಾನ್ಯತೆ ಪಡೆದ ಶಿಕ್ಷಣ ಶಾಲೆಗಳಲ್ಲಿ 7ನೇ ತರಗತಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ವಿಷಯಗಳೊಂದಿಗೆ, ಇಂಗ್ಲೀಷ್ ಅಥವಾ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರತಕ್ಕದ್ದು.

3. **ಪ್ರವೇಶಕ್ಕಾಗಿ ಇತರೆ ಅರ್ಹತೆಗಳು:-**

ಅ) ಭಾರತದ ಪ್ರಜೆಯಾಗಿರಬೇಕು.

ಆ) ಅರ್ಜಿ ಸ್ವೀಕರಿಸುವ ಹಿಂದಿನ ದಿನಾಂಕಕ್ಕೆ ಅಭ್ಯರ್ಥಿಯು ಕರ್ನಾಟಕದಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಕನಿಷ್ಟ 05 ವರ್ಷಗಳ ವ್ಯಾಸಂಗ ಮಾಡಿರಬೇಕು.ಪ್ಯಾರಾ 7(ಆ)ರಲ್ಲಿ ಸೂಚಿಸಿರುವ ಷರತ್ತು ಈ ಕೆಳಕಂಡ ಗುಂಪಿನ ಪಾಲಕರ ಮಕ್ಕಳಿಗೆ ಅನ್ವಯವಾಗುವುದಿಲ್ಲ.

1) ಕೇಂದ್ರ ಸರ್ಕಾರದ ನೌಕರರು, ಸೈನಿಕ ದಳದವರು ಮತ್ತು ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು.
2) ಕರ್ನಾಟಕ ಸರ್ಕಾರದ ನೌಕರರು, ಸೇವೆಯಲ್ಲಿರುವ/ನಿಯೋಜಿತ ಸೇವೆಯಲ್ಲಿರುವ/ ಸೇವೆಯಿಂದ 04 ವರ್ಷದ ಅವಧಿಯೊಳಗೆ ನಿರ್ವತ್ತರಾದ ಕರ್ನಾಟಕ ಸರ್ಕಾರದ ಸೇವೆಯಲ್ಲಿದ್ದು ಐಎಎಸ್ ದರ್ಜೆಗೇರಿದ ನೌಕರರು ಸೇರಿದಂತೆ (ಅರ್ಜಿ ಸ್ವೀಕರಿಸುವ ಅಂತಿಮ ದಿನಾಂಕದೊಳಗಾಗಿ)

4. **ಅರ್ಜಿ ಸಲ್ಲಿಸುವ ಬಗ್ಗೆ ಸೂಚನೆ:-**

ಅರ್ಜಿ ನಮೂನೆಯನ್ನು **ದಿನಾಂಕ: 21-04-2025 ರಿಂದ ದಿನಾಂಕ: 15-05-2025** ರವರೆಗೆ ಆಯಾ ಸರ್ಕಾರಿ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಯ ಪ್ರಿನ್ಸಿಪಾಲರಿಂದ ಪಡೆಯಬಹುದಾಗಿದೆ.

**ಅರ್ಜಿ ಮತ್ತು ನೋಂದಣಿ ಶುಲ್ಕ:-** ಸಾಮಾನ್ಯ., ವರ್ಗ-2ಎ, ವರ್ಗ-2ಬಿ, ವರ್ಗ-3ಎ ಮತ್ತು ವರ್ಗ-3ಬಿ ಗುಂಪಿನ ಅಭ್ಯರ್ಥಿಗಳಿಗೆ ರೂ.5/- ಎಸ್.ಸಿ, ಎಸ್.ಟಿ ಮತ್ತು ವರ್ಗ-1 ಗುಂಪಿನ ಅಭ್ಯರ್ಥಿಗಳಿಗೆ ರೂ. 1/- ಸಂಬಂಧಿಸಿದ ಶುಲ್ಕವನ್ನು ನಗದಾಗಿ ಪಾವತಿಸಿ ಪ್ರಿನ್ಸಿಪಾಲರಿಂದ ಅರ್ಜಿಗಳನ್ನು ಪಡೆಯಬಹುದು.

ಪೂರ್ತಿಯಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳೊಂದಿಗೆ ಸಂಬಂಧಪಟ್ಟ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳ ಪ್ರಿನ್ಸಿಪಾಲರಿಗೆ **ದಿನಾಂಕ:15-05-2025 ಸಂಜೆ 5.30ರ** ಒಳಗಾಗಿ ತಲುಪಿಸತಕ್ಕದ್ದು. ಅಂತಿಮ ದಿನಾಂಕದ ನಂತರ ಅಂಚೆಯಿಂದ ಬರುವ ಅಥವಾ ಖುದ್ದಾಗಿ ಸಲ್ಲಿಸುವ ಅರ್ಜಿಗಳನ್ನು

ಯಾವ ಸಂದರ್ಭದಲ್ಲೂ ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಸಂಬಂಧಿಸಿದ ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಯ ಪ್ರಿನ್ಸಿಪಾಲರಿಂದ ಪಡೆಯಬಹುದಾಗಿದೆ.

**5. ಎಂಟನೇ ತರಗತಿಗಳ ಪ್ರಾರಂಭ:-**

ಅರ್ಹ ಅಭ್ಯರ್ಥಿಗಳಿಗೆ **ದಿನಾಂಕ:17-05-2025**ರ ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಮುಗಿಸಿ ಶೈಕ್ಷಣಿಕ ತರಗತಿಗಳನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ರವರ 2025-26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಸರಿಸಿ ಅದರಂತೆ ಕ್ರಮವಹಿಸುವುದು.

Digitally signed by
MANJUSHREE N
Date: 25-04-2025
15:53:27

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

***ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರಿಗೆ*** - ಮೇಲ್ಕಂಡ ಅಧಿಸೂಚನೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಅಭ್ಯರ್ಥಿಗಳಿಗೆ ವಿವರವಾದ ಮಾಹಿತಿಯನ್ನು ನೀಡುವುದು ಹಾಗೂ ಹಾಲಿ ಜಾರಿಯಲ್ಲಿರುವ ನಿಯಮಗಳಂತೆಯೇ ಈ ಸಾಲಿನಲ್ಲೂ ಅರ್ಜಿಗಳನ್ನು ಕಲ್ಲಚ್ಚು ಮಾಡಿಸಿ ಅಭ್ಯರ್ಥಿಗಳಿಗೆ ವಿತರಿಸುವುದು. ಅರ್ಜಿಯ ಎರಡು ಪ್ರತಿಗಳನ್ನು ಮಾಹಿತಿಗಾಗಿ ಆಯುಕ್ತಾಲಯಕ್ಕೆ ಕಳುಹಿಸತಕ್ಕದ್ದು. ಹಾಗೂ ವಸೂಲಾದ ಅರ್ಜಿಯ ಶುಲ್ಕವನ್ನು ಆಗಿಂದಾಗ್ಗೆ ಸರ್ಕಾರಕ್ಕೆ ಜಮಾ ಮಾಡಿ ಆಯುಕ್ತಾಲಯಕ್ಕೆ ವರದಿ ಮಾಡುವುದು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಆಡಳಿತ ವಿಭಾಗಕ್ಕೆ – ಆಯುಕ್ತಾಲಯದ ವೆಬ್‌ಸೈಟ್‌ನಲ್ಲಿ ಸದರಿ ಅಧಿಸೂಚನೆಯನ್ನು ಪ್ರಚುರಪಡಿಸುವುದು.
7. ಡಿವಿಪಿ(2) ವಿಭಾಗಕ್ಕೆ – ಮಾಹಿತಿಗಾಗಿ
8. ಕಛೇರಿ ಪ್ರತಿ.